**9ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,**
**ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.**

**ಎಸ್.ಸಿ.ನಂ. 123 / 2018**

**(ಪ್ರಾ.ಸಾ.8 / ಚಾ.ಸಾ.3)**

ತಾಃ 21-02-2019 ರಂದು ಸಾಕ್ಷಿಗೆ ಪ್ರಮಾಣ ವಚನ ಮಾಡಿಸಲಾಯಿತು.

| | | |
|---|---|---|
| ಸಾಕ್ಷಿದಾರರ ಹೆಸರು | ಃ | ಗಂಗಾಧರ್ |
| ತಂದೆಯ ಹೆಸರು/ ಗಂಡನ ಹೆಸರು | ಃ | ಚುಂಚಯ್ಯ |
| ವಯಸ್ಸು | ಃ | 29 ವರ್ಷ |
| ಉದ್ಯೋಗ | ಃ | ವ್ಯವಸಾಯ |
| ವಾಸ ಸ್ಥಳ | ಃ | ಕುಣಿಗಲ್ |

**ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಃ**

ಚಾ.ಸಾ 2 ನಿಂಗರಾಜು ನನ್ನ ಸ್ನೇಹಿತ. ಚಾ.ಸಾ 2 ಲಾರಿ ಮಾಲೀಕನಾಗಿದ್ದು ನನ್ನ ಸಂಬಂಧಿಕರು ಚಾ.ಸಾ 2 ರವರ ಊರಿನಲ್ಲಿ ವಾಸ ಮಾಡುತ್ತಿದ್ದು, ನಾನು ಅವರ ಊರಿಗೆ ಹೋಗುತ್ತಿರುತ್ತೇನೆ. ಚಾ.ಸಾ 1 , ಚಾ.ಸಾ 2ರವರ ಲಾರಿಯ ಚಾಲಕನಾಗಿರುತ್ತಾನೆ.

2. ಇಲ್ಲಿಗೆ ಸುಮಾರು 2 ವರ್ಷದ ಹಿಂದೆ ಚಾ.ಸಾ 2 ನನಗೆ ಫೋನ್ ಮಾಡಿ ನಮ್ಮ ಲಾರಿ ಕಳ್ಳತನ ಆಗಿದೆ ನಮ್ಮ ಡ್ರೈವರ್‌ಗೆ ಹೊಡೆದು ಘಟನೆಯಾಗಿದೆ ಹೋಗಿ ಬರೋಣ ಬನ್ನಿ ಎಂದು ನನ್ನನ್ನು ಕರೆದರು. ಆ ನಂತರ ನಾನು ಮತ್ತು ಚಾ.ಸಾ 2ರವರು ಟೋಲ್‌ನಿಂದ ಸ್ವಲ್ಪ ಮುಂದೆ ಘಟನೆ ನಡೆದ ಸ್ಥಳಕ್ಕೆ ಹೋಗಿದ್ದೆವು. ನಾವು ಸ್ಥಳಕ್ಕೆ ಹೋದಾಗ ಸದರಿ ಲಾರಿಯ ಚಾಲಕ ಚಾ.ಸಾ 1

ಸ್ಥಳದಲ್ಲಿ ಇದ್ದ ಆತನ ಕೈಗಳಿಗೆ ಮತ್ತು ತಲೆಗೆ ಏಟು ಆಗಿತ್ತು. ನಾವು ಆತನನ್ನು ವಿಚಾರ ಮಾಡಲಾಗಿ ನಾವು ಆತನನ್ನು ವಿಚಾರ ಮಾಡಲಾಗಿದೆ ಲಾರಿಯಲ್ಲಿ ಹೋಗುತ್ತಿದ್ದಾಗ ಹೋಮಿನಿ ಕಾರಿನಲ್ಲಿ ಹುಡುಗರು ಬಂದು ಲಾರಿಯನ್ನು ಅಡ್ಡ ಹಾಕಿ, ಆತನನ್ನು ಹೋಮಿನಿ ಕಾರಿನಲ್ಲಿ ಕುಳ್ಳಿರಿಸಿಕೊಂಡು ಪೆಟ್ರೋಲ್ ಬಂಕ್‌ಗೆ ಹೋಗಿ ಕಾರಿಗೆ ಪೆಟ್ರೋಲ್ ಹಾಕಿಸಿಕೊಂಡು ಆತನ ಕಣ್ಣಿಗೆ ಬಟ್ಟೆಯನ್ನು ಕಟ್ಟಿ ವಾಪಸ್ಸು ಆತನನ್ನು ಅಲ್ಲಿಯೇ ಇಳಿಸಿ ಹೋದರು ಎಂದು ಹೇಳಿದ.

3. ನಂತರ ನಾವು ಪೋಲೀಸ್ ಠಾಣೆಗೆ ಬಂದು ಚಾಲಕ ಮತ್ತು ಮಾಲೀಕ ಇಬ್ಬರೂ ದೂರು ಕೊಟ್ಟಿದ್ದಾರೆ. ಪೋಲೀಸರು ನನ್ನ ಹೇಳಿಕೆಯನ್ನು ಪಡೆದುಕೊಂಡಿಲ್ಲ. ಸದರಿ ಲಾರಿಯನ್ನು ಲಾರಿ ಮತ್ತು ಪೆಟ್ರೋಲ್ ಬಂಕ್ ಕಾಣುತ್ತಿರುವ ಪೋಟೋಗಳನ್ನು ನೋಡುತ್ತಿದ್ದು ಅವುಗಳನ್ನು ಈಗಾಗಲೇ ನಿ.ಪಿ 3 ಮತ್ತು 4 ಎಂದು ಗುರುತಿಸಲಾಗಿದೆ.

**<u>ಪಾಟೀ ಸವಾಲುಃ ಶ್ರೀ ಎ.ಟಿ 1ನೇ ಆರೋಪಿ ಪರ ವಕೀಲರಿಂದ ಃ</u>**

ನನ್ನ ಸ್ನೇಹಿತ ಲಾರಿ ಮಾಲೀಕ ಆತನ ಹೆಸರು ನಿಂಗರಾಜು. ಚಾ.ಸಾ 2 ಮರುಳು ಮತ್ತು ಜಲ್ಲಿ ಸಾಗಿಸುವ ವ್ಯಾಪಾರ 5 – 6 ವರ್ಷಗಳಿಂದ ಮಾಡುತ್ತಾರೆ. ಚಾ.ಸಾ 2ರವರ ಬಳಿ 2 ಲಾರಿಗಳು ಇವೆ. ಅವುಗಳ ನಂಬರ್ ನನಗೆ ಗೊತ್ತಿಲ್ಲ. ಆ 2 ಲಾರಿಗಳಲ್ಲಿ ಮರಳು ಮತ್ತು ಜಲ್ಲಿ ಸಾಗಿಸುವ ವ್ಯಾಪಾರ ಬೆಂಗಳೂರಿನಲ್ಲಿ ಮಾಡುತ್ತಾರೆ. ಕುಣಿಗಲ್ ಮತ್ತು ಸರ್ಜಾಪುರದಿಂದ ಮರಳನ್ನು ತರುತ್ತಿದ್ದರು. ಚಾ.ಸಾ 2ರವರು ದೂರವಾಣಿ ಮೂಲಕ ನನ್ನನ್ನು ಕರೆದಿಲ್ಲ ನಾನು ಮತ್ತು ಚಾ.ಸಾ 2 ಹೊಗಿಲ್ಲ ಎನ್ನುವುದು ಸರಿಯಲ್ಲ. ನಾವು ಸ್ಥಳಕ್ಕೆ ಹೋಗಿಲ್ಲ ಚಾ.ಸಾ 1ರವರಿಗೆ ಯಾವುದೇ ಗಾಯಗಳು ಆಗಿಲ್ಲ ಎನ್ನುವುದು ಸರಿಯಲ್ಲ. ಚಾ.ಸಾ 2ರವರಿಗೆ ಪರ್ಮಿಟ್ ಇರಲಿಲ್ಲ ಅದ್ದರಿಂದ ಸುಳ್ಳು ಕತೆಯನ್ನು ಸೃಷ್ಠಿಸಿ ಚಾ.ಸಾ 1ರವರ ಕೈಯಲ್ಲಿ ದೂರು ಕೊಡಿಸಿದ್ದಾರೆ ಎನ್ನುವುದು ಸರಿಯಲ್ಲ. ಚಾ.ಸಾ 2ರವರ ಲಾರಿಯನ್ನು

ಮೈನ್ಸ್ ಮತ್ತು ಜ್ಯುವೆಲಜಿ ಇಲಾಖೆಯವರು ಹಿಡಿಯುತ್ತಾರೆ ಎಂದು ಸುಳ್ಳು ದೂರು ಕೊಡಿಸಿದ್ದಾರೆ ಎನ್ನುವುದು ಸರಿಯಲ್ಲ. ನಾನು ಯಾವುದೇ ಸ್ಥಳಕ್ಕೆ ಹೋಗಿಲ್ಲ ಎನ್ನುವುದು ಸರಿಯಲ್ಲ.

**ಪಾಟೀ ಸವಾಲುಃ ಶ್ರೀ ಆರ್.ವಿ.ವಿ.ಎಂ 2ನೇ ಆರೋಪಿ ಪರ ವಕೀಲರಿಂದ ಃ**

ಚಾ.ಸಾ 2 ನನ್ನ ಪಕ್ಕದ ಊರಿನವರು ಎನ್ನುವುದು ಸರಿಯಲ್ಲ. ಲಾರಿ ಮಾಲೀಕರು ಚಾ.ಸಾ 2 ಲಾರಿ ಇಲ್ಲ ಎಂದು ದೂರವಾಣಿ ಮೂಲಕ ಹೇಳಿದ್ದಾರೆ ಎಂದರೆ ಸಾಕ್ಷಿ ಹೌದು ಎಂದು ನುಡಿದಿದ್ದಾರೆ. ನಂತರ ನೀವು ಮತ್ತು ಲಿಂಗರಾಜು ನೈಸ್ ಟೋಲ್ ಹತ್ತಿರ ಹೋದಿರಿ ಎಂದು ಪ್ರಶ್ನಿಸಲಾಗಿ ಹೌದು ಎಂದು ನುಡಿದಿದ್ದಾರೆ. ನೈಸ್ ಟೋಲ್ ಹತ್ತಿರ ಎಷ್ಟು ಗಂಟೆಗೆ ಹೋದಿರಿ ಎಂದು ಪ್ರಶ್ನಿಸಲಾಗಿ ಬೆಳಗಿನ ಜಾವ 2.30 ರಿಂದ 3.00ಗಂಟೆ ಸಮಯಕ್ಕೆ ಹೋದೆವು ಎಂದು ನುಡಿದಿದ್ದಾರೆ. ಸದರಿ ದಿನಾಂಕ ಗೊತ್ತಾ ಎಂದರೆ ನೆನಪಿಲ್ಲ ಎಂದು ನುಡಿದಿದ್ದಾರೆ. ಠಾಣೆಯ ಬಳಿ ಹೋದಾಗ ಸಮಯ ಎಷ್ಟು ಆಗಿತ್ತು ಎಂದರೆ ಬೆಳಗ್ಗೆ ಸುಮಾರು 8.00ರಿಂದ 8.30ಕ್ಕೆ ಹೋಗಿದ್ದೇವೆ ಎಂದು ನುಡಿದಿದ್ದಾರೆ. ಸಾಕ್ಷಿಗೆ ಡ್ರೈವರ್‌ಗೆ ಹೊಡೆದಿರುತ್ತಾರೆ ಹೋಗಿ ಬರೋಣ ಎಂದು ಕರೆದರು ಎಂದು ಪೋಲೀಸರ ಮುಂದೆ ಹೇಳಿದ್ದಿರಾ ಎಂದರೆ ನಾನು ಪೋಲೀಸರ ಮುಂದೆ ಏನನ್ನು ಹೇಳಿಲ್ಲ ಎಂದು ನುಡಿದಿದ್ದಾರೆ. ಲಾರಿ ಪೋಟೋಗಳನ್ನು ಪೋಲೀಸ್ ಠಾಣೆಯಲ್ಲಿ ತೋರಿಸಿಲ್ಲ ಆ ಪೋಟೋಗಳನು ಇದೇ ಮೊದಲ ಬಾರಿಗೆ ನೋಡುತ್ತಿದ್ದೇನೆ ಎಂದರೆ ಸರಿ. ಸಾಕ್ಷಿಗೆ ಡ್ರೈವರ್ ಲಾರಿಯನ್ನು ಅಪಹರಿಸಿ ಕತೆ ಕಟ್ಟಿದ್ದು ಆ ವಿಷಯ ಪೋಲೀಸರಿಗೆ ಗೊತ್ತಾಗಿ, ಡ್ರೈವರನ್ನು ಆ ಕೇಸಿನಿಂದ ಬಚಾವು ಮಾಡಲು ಅಮಾಯಕರ ಮೇಲೆ ಸುಳ್ಳು ಕೇಸನ್ನು ಫಿಟ್ ಮಾಡಿಸಿದ್ದೀರಾ, ಕತೆ ಕಟ್ಟಿದ್ದೀರಾ ಎಂದರೆ ಸುಳ್ಳು ಎಂದು ನುಡಿದಿದ್ದಾರೆ.

**ಪಾಟೀ ಸವಾಲುಃ ಆರೋಪಿ 3ರಿಂದ 5ರ ಪರವಾಗಿ ಃ**

ಗೈರು ಹಾಜರು . ಪಾಟೀ ಸವಾಲು ಇಲ್ಲಾ ಎಂದು ತೆಗೆದುಕೊಳ್ಳಲಾಯಿತು.

{ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ.}

ಓ. ಹೇ. ಸಾ. ಸ. ಸಹಿ ಮಾಡಿದ್ದಾರೆ.

(ಜೆ.ವಿ ವಿಜಯಾನಂದ)
9ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.